# ಬೆಂಗಳೂರು ವಿಶ್ವವಿದ್ಯಾಲಯ

Accredited by NAAC with A++
ಜ್ಞಾನಭಾರತಿ, ಬೆಂಗಳೂರು -560056

ಸಂಖ್ಯೆ: ಎಸಿಎ-4/ಸ್ನಾ. ಪ./2026-27

ದಿನಾಂಕ:16.07.2026

## ಸ್ನಾತಕೋತ್ತರ ಪದವಿ ಪ್ರವೇಶಾತಿ ಅಧಿಸೂಚನೆ

**ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ: 16.07.2026**

*****

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯ ಸ್ನಾತಕೋತ್ತರ ವಿಭಾಗ, ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ರಾಮನಗರ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ಈ ಕೆಳಕಂಡ ಸ್ನಾತಕೋತ್ತರ ಕೋರ್ಸುಗಳು ಮತ್ತು ಬಿ.ಪಿ.ಎಡ್ ಕೋರ್ಸುಗಳ ಪ್ರವೇಶಕ್ಕೆ 2026-27 ನೇ ಶೈಕ್ಷಣಿಕ ಸಾಲಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1) **ಕಲಾ ನಿಕಾಯ:** ಎಂ.ಎ- ಅರ್ಥಶಾಸ್ತ್ರ, ಆಂಗ್ಲ, ಹಿಂದಿ, ಇತಿಹಾಸ, ಪತ್ರಿಕೋದ್ಯಮ ಮತ್ತು ಸಂವಹನ, ಕನ್ನಡ, ಕನ್ನಡ (ತೌಲಾನಿಕ), ತತ್ವಶಾಸ್ತ್ರ, ರಾಜ್ಯಶಾಸ್ತ್ರ, ಗ್ರಾಮೀಣಾಭಿವೃದ್ಧಿ ಅಧ್ಯಯನ, ಸಂಸ್ಕೃತ, ಸಮಾಜಶಾಸ್ತ್ರ, ತೆಲುಗು, ಉರ್ದು, ಮಹಿಳಾ ಅಧ್ಯಯನ.
   ಮಾಸ್ಟರ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್: ಎಂ.ಪಿ.ಎ ಇನ್ ಥೇಟರ್ ಆರ್ಟ್ಸ್, ಭರತನಾಟ್ಯ, ಕಾರ್ನಾಟಿಕ್ ಸಂಗೀತ (vocal/Instrumental).
   ಮಾಸ್ಟರ್ ಆಫ್ ವಿಶ್ವಲ್ ಆರ್ಟ್ಸ್ : ಎಂ.ವಿ.ಎ ಇನ್ ಶಿಲ್ಪಕಲೆ, ಚಿತ್ರಕಲೆ, ಪಿಂಟ್ರ್ ಮೇಕಿಂಗ್.
   ಎಂ.ಎಸ್.ಡಬ್ಲ್ಯೂ.
   **ಸ್ವ ಹಣಕಾಸು ಕೋರ್ಸುಗಳು (ವಿಶ್ವವಿದ್ಯಾಲಯದ ವಿಭಾಗಗಳಲ್ಲಿ): ಎಂ.ಎ.- ಮಾಧ್ಯಮ ಅಧ್ಯಯನ ಹಾಗೂ ಸಾರ್ವಜನಿಕ ಸಂಪರ್ಕ ಮತ್ತು ಜಾಹೀರಾತು.**

2) **ವಿಜ್ಞಾನ ನಿಕಾಯ**: ಎಂ.ಎಸ್ಸಿ.- ಅನ್ವಯಿಕ ತಳಿಶಾಸ್ತ್ರ, ಅನ್ವಯಿಕ ಭೂಗರ್ಭಶಾಸ್ತ್ರ, ಜೀವರಸಾಯನಶಾಸ್ತ್ರ, ಜೀವತಂತ್ರಜ್ಞಾನ, ಸಸ್ಯಶಾಸ್ತ್ರ , ರಸಾಯನಶಾಸ್ತ್ರ (Specialization in Organic, Inorganic & Physical Chemistry at 2nd year level only), ವಿದ್ಯುನ್ಮಾನ ಮಾಧ್ಯಮ, ವಿದ್ಯುನ್ಮಾನ ವಿಜ್ಞಾನ, ಪರಿಸರ ವಿಜ್ಞಾನ, ಫುಡ್ ಟೆಕ್ನಾಲಜಿ, ಫ್ಯಾಷನ್ ಅಂಡ್ ಅಪರೆಲ್ ಡಿಸೈನ್, ಭೂಗೋಳಶಾಸ್ತ್ರ, ಹ್ಯೂಮನ್ ಕಾನ್ಷಿಯಸ್‌ನೆಸ್ ಅಂಡ್ ಯೋಗಿಕ್ ಸೈನ್ಸ್, ಜೀವ ವಿಜ್ಞಾನ, ಗಣಿತ ಶಾಸ್ತ್ರ, ಸೂಕ್ಷ್ಮ ಜೀವ ಶಾಸ್ತ್ರ , ಭೌತಶಾಸ್ತ್ರ , ಮನ:ಶಾಸ್ತ್ರ , ಸಂಖ್ಯಾಶಾಸ್ತ್ರ , ಪ್ರಾಣಿಶಾಸ್ತ್ರ , ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಮತ್ತು ವಿಧಿ ವಿಜ್ಞಾನ.
   **ಸ್ವ ಹಣಕಾಸು ಕೋರ್ಸುಗಳು (ವಿಶ್ವವಿದ್ಯಾಲಯದ ವಿಭಾಗಗಳಲ್ಲಿ): ಎಂ.ಎಸ್ಸಿ.-ಫಿಲ್ಮ್ ಮೇಕಿಂಗ್, ವಿಧಿ ವಿಜ್ಞಾನ, ಗ್ರಾಫಿಕ್ಸ್ ಮತ್ತು ಅನಿಮೇಷನ್**

3) **ವಾಣಿಜ್ಯ ನಿಕಾಯ: ಎಂ.ಕಾಂ.**
   **ಸ್ವ ಹಣಕಾಸು ಕೋರ್ಸುಗಳು (ವಿಶ್ವವಿದ್ಯಾಲಯದ ವಿಭಾಗಗಳಲ್ಲಿ): ): ಎಂ.ಕಾಂ (ಎಫ್.ಎ.), ಎಂ.ಕಾಂ (FinTech & AI) ಮತ್ತು ಎಂ.ಟಿ.ಟಿ.ಎಂ.**

4) **ಶಿಕ್ಷಣ ನಿಕಾಯ: ಬಿ.ಪಿ.ಎಡ್.**

5) **ಸ್ನಾತಕೋತ್ತರ ಕೇಂದ್ರ, ರಾಮನಗರ** : ಎಂ.ಎ ಕನ್ನಡ, ಅರ್ಥಶಾಸ್ತ್ರ, ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಗ್ರಾಮೀಣಾಭಿವೃದ್ಧಿ ಅಧ್ಯಯನ, ಎಂ.ಎಸ್ಸಿ ಗಣಿತ ಶಾಸ್ತ್ರ, ಎಂ.ಕಾಂ ಮತ್ತು ಎಂ.ಎಸ್.ಡಬ್ಲ್ಯೂ.

**ಅರ್ಜಿಯನ್ನು UUCMS ಆನ್‌ಲೈನ್ ಪೋರ್ಟಲ್ / BU ಅಂತರಜಾಲ (Off –line) ಮೂಲಕ ಸಲ್ಲಿಸಲು ಮಾರ್ಗಸೂಚಿಗಳು:**

**A) UUCMS ಆನ್‌ಲೈನ್ ಪೋರ್ಟಲ್ ಮುಖಾಂತರ:**

1) ಸ್ನಾತಕೋತ್ತರ ಪದವಿ (M.Ed & M.P.Ed ಕೋರ್ಸು ಹೊರತುಪಡಿಸಿ) / ಬಿ.ಪಿ.ಎಡ್ ಕೋರ್ಸುಗಳಿಗೆ ಅರ್ಜಿಗಳನ್ನು ಸಲ್ಲಿಸಬಯಸುವ ಅಭ್ಯರ್ಥಿಗಳು UUCMS ಆನ್‌ಲೈನ್ ಪೋರ್ಟಲ್ https://uucms.karnataka.gov.in/Login/Index ಮೂಲಕ ಅರ್ಜಿಗಳನ್ನು ಸಲ್ಲಿಸುವುದು. (ಪಿ.ಜಿ ಪ್ರವೇಶಾತಿ ಅಭ್ಯರ್ಥಿಗಳ user manual 2022 ನೋಡುವುದು).

Scanned with OKEN Scanner

2) ಒಂದಕ್ಕಿಂತ ಹೆಚ್ಚಿನ ಕೋರ್ಸುಗಳಿಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಇಚ್ಛಿಸಿದ ಕೋರ್ಸುಗಳನ್ನು ಆಯ್ದುಕೊಂಡು ಪ್ರತ್ಯೇಕ ಅರ್ಜಿಗಳನ್ನು online ಮೂಲಕ ಸಲ್ಲಿಸುವುದು.

3) ಅರ್ಜಿ ಶುಲ್ಕ ರೂ.300/-(ಕರ್ನಾಟಕ ನಿವಾಸಿಯಾದ ಪ.ಜಾತಿ/ಪ.ಪಂಗಡ/ ಪ್ರವರ್ಗ-1 ಮತ್ತು ತೃತೀಯ ಲಿಂಗಿಗಳಿಗೆ ರೂ.150/ ಮಾತ್ರ) ಗಳನ್ನು online ನಲ್ಲಿ ತಿಳಿಸಿರುವ ಲಿಂಕ್‌ನ್ನು ಬಳಸಿ ಪಾವತಿಸುವುದು.

**ಬಿ) ಆಫ್-ಲೈನ್ ಅರ್ಜಿಯನ್ನು BU Website ಮುಖಾಂತರ ಸಲ್ಲಿಸುವ ವಿಧಾನ:**

1) ಯುಜಿ ಪರೀಕ್ಷೆಯ ಫಲಿತಾಂಶಕ್ಕಾಗಿ ಕಾಯುತ್ತಿರುವ ಮತ್ತು UUCMS ಪೋರ್ಟಲ್ **https://uucms.karnataka.gov.in/Login/Index** ಮೂಲಕ ಅರ್ಜಿ ಸಲ್ಲಿಸಲು ಸಾಧ್ಯವಾಗದ ಅರ್ಜಿದಾರರು, ಬೆಂಗಳೂರು ವಿಶ್ವವಿದ್ಯಾಲಯದ ವೆಬ್‌ಸೈಟ್ **https://bangaloreuniversity.karnataka.gov.in** ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಜಿ ಶುಲ್ಕವನ್ನು ರೂ:300/-(ಎಸ್‌ಸಿ/ಎಸ್‌ಟಿ/ಕರ್ನಾಟಕದ ವರ್ಗ-I ಮತ್ತು ಟ್ರಾನ್ಸ್‌ಜೆಂಡರ್ ಅಭ್ಯರ್ಥಿಗಳಿಗೆ ರೂ:150/-)ವನ್ನು ಬೆಂಗಳೂರು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪಾವತಿಸಬಹುವುದು.

2) ಒಂದಕ್ಕಿಂತ ಹೆಚ್ಚು ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸಲು ಬಯಸುವ ವಿದ್ಯಾರ್ಥಿಗಳು, ಪ್ರತಿ ಕೋರ್ಸ್‌ಗೆ ಡೌನ್ ಲೋಡ್ ಮಾಡಿದ ಅರ್ಜಿಯನ್ನು ಭರ್ತಿ ಮಾಡಿ ಆಯಾ ವಿಭಾಗಗಳಿಗೆ (ಬೆಂಗಳೂರು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ವಿಭಾಗವಾರು ವಿಳಾಸ ಪಟ್ಟಿಯನ್ನು ನೋಡಿ) ಶುಲ್ಕದ ರಶೀದಿಯ ಪ್ರತಿ ಮತ್ತು ಸಂಬಂಧಿತ ದಾಖಲೆಗಳು/ಪ್ರಮಾಣಪತ್ರಗಳ ಸ್ವಯಂ ದೃಢೀಕೃತ ಪ್ರತಿಗಳೊಂದಿಗೆ 13.08.2026 ರೊಳಗೆ ತಪ್ಪದೆ ಸಲ್ಲಿಸಬೇಕು.

3) ಅರ್ಜಿದಾರರು ಯುಜಿ ಪರೀಕ್ಷೆಯ ಫಲಿತಾಂಶ ಘೋಷಣೆಯ ನಂತರ Result sheet /ಮಾರ್ಕ್ ಕಾರ್ಡ್ ಅನ್ನು ಆಯಾ ವಿಭಾಗಗಳಿಗೆ ದಿನಾಂಕಗಳಿಗೆ 13.08.2026 ರೊಳಗೆ ಸಲ್ಲಿಸಬೇಕು ಮತ್ತು ನಂತರ ಬಿ.ಪಿ.ಎಡ್/ಪಿಜಿ ಕೋರ್ಸ್‌ಗೆ ಆಯ್ಕೆಯಾಗಿ ಪ್ರವೇಶ ಪಡೆದ ಮೇಲೆ, UUCMS ಪೋರ್ಟಲ್‌ನಲ್ಲಿ ತಪ್ಪದೆ ನೋಂದಾಯಿಸಿ ಕೊಳ್ಳಬೇಕಾಗುತ್ತದೆ.

- ಹೆಚ್ಚಿನ ವಿವರಗಳಿಗೆ ಬೆಂಗಳೂರು ವಿಶ್ವವಿದ್ಯಾಲಯದ ಅಂತರ್ಜಾಲ **https://bangaloreuniversity.karnataka.gov.in** ನಲ್ಲಿ ನೋಡಬಹುದು.
- 2026-27ನೇ ಸಾಲಿಗೆ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ದಂಡ ಶುಲ್ಕವಿಲ್ಲದೆ ಅರ್ಜಿಗಳನ್ನು ಸಲ್ಲಿಸಲು **07.08.2026** ಕೊನೆಯ ದಿನಾಂಕವಾಗಿರುತ್ತದೆ ಹಾಗೂ ರೂ.200/-ಗಳ ದಂಡ ಶುಲ್ಕದೊಂದಿಗೆ ದಿನಾಂಕ **11.08.2026** ರವರೆಗೂ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
- ಆನ್‌ಲೈನ್ ಮುಖಾಂತರ ಕೋರ್ಸಿಗೆ ಸಲ್ಲಿಸಿದ ಅರ್ಜಿ/ಅಥವಾ ಭರ್ತಿ ಮಾಡಿದ ಡೌನ್ ಲೋಡ್ ಮಾಡಿದ ಅರ್ಜಿಗಳ Hard Copy ಯ ಜೊತೆ ಸ್ವಯಂ ಧೃಢೀಕರಿಸಿದ ದಾಖಲೆಗಳನ್ನು ಸಂಬಂಧಪಟ್ಟ ವಿಭಾಗಗಳಿಗೆ ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ **13.08.2026** ರೊಳಗೆ ಸಲ್ಲಿಸುವುದು (ವಿಭಾಗಗಳ ವಿವರ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ನೋಡುವುದು).
- ಅಂತಿಮ ದಿನಾಂಕದ ನಂತರ ಸಲ್ಲಿಸುವ ಮತ್ತು ಅಪೂರ್ಣ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.
- **ಸ್ವ-ಹಣಕಾಸು ಮತ್ತು ಪಿ.ಜಿ ಕೋರ್ಸುಗಳನ್ನು ಒಳಗೊಂಡಂತೆ ಪ್ರತಿ ಕೋರ್ಸಿಗೆ ಕನಿಷ್ಠ 10 ಅಭ್ಯರ್ಥಿಗಳ ಪ್ರವೇಶವಿದ್ದಲ್ಲಿ ಮಾತ್ರ ಅಂತಹ ಕೋರ್ಸುಗಳನ್ನು ಈ ಶೈಕ್ಷಣಿಕ ವರ್ಷಲ್ಲಿ ತರಗತಿಗಳನ್ನು ನಡೆಸಲಾಗುವುದು. ಇಲ್ಲದಿದ್ದರೆ ಶುಲ್ಕವನ್ನು ಮರುಪಾವತಿಸಲಾಗುತ್ತದೆ.**
- ಸಮಾಜಕಾರ್ಯ (ಎಂ.ಎಸ್.ಡಬ್ಲ್ಯೂ.) ಕೋರ್ಸಿಗೆ ಮಾತ್ರ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುವುದು (ವಿವರಗಳಿಗೆ ವಿಶ್ವವಿದ್ಯಾಲಯದ ಅಂತರ್ಜಾಲವನ್ನು ನೋಡುವುದು).
- ಯು.ಸಿ.ಪಿ.ಇ ಯಲ್ಲಿ **ಬಿ.ಪಿ.ಎಡ್** ಕೋರ್ಸಿನ ಅಭ್ಯರ್ಥಿಗಳಿಗೆ ದೈಹಿಕ ಪರೀಕ್ಷೆ ನಡೆಸಲಾಗುವುದು.
- ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸ ಬೇಕಾದ ದೂರವಾಣಿ ಸಂಖ್ಯೆಗಳು: **(1) 080-69261300 (UUCMS Help line) (2) 080-22961555( Bangalore University UUCMS office).**

Scanned with OKEN Scanner

| | | |
|---|---|---|
| | **ಅರ್ಜಿಗಳನ್ನು ಸಲ್ಲಿಸುವ ಹಾಗೂ ಪ್ರವೇಶ ಪ್ರಕ್ರಿಯೆಯ ದಿನಾಂಕಗಳು:** | |
| 1 | ದಂಡ ಶುಲ್ಕವಿಲ್ಲದೆ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ ( M.Ed &M.P.Ed ಕೋರ್ಸ್‌ನ್ನು ಹೊರತುಪಡಿಸಿ) | 07.08.2026 |
| 2 | ರೂ. 200/- ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ( M.Ed &M.P.Ed ಕೋರ್ಸ್‌ನ್ನು ಹೊರತುಪಡಿಸಿ) | 11.08.2026 |
| 3 | UUCMS ಆನ್ ಲೈನ್ ಮುಖಾಂತರ ಸಲ್ಲಿಸಿದ ಅರ್ಜಿ/ ಭರ್ತಿ ಮಾಡಿದ ಡೌನ್ ಲೋಡ್ ಮಾಡಿದ ಅರ್ಜಿಗಳ Hard Copy ಜೊತೆಯಲ್ಲಿ ಸ್ವಯಂ ದೃಢೀಕರಿಸಿದ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ವಿಭಾಗಗಳಿಗೆ ಸಲ್ಲಿಸಲು ಕೊನೆಯ ದಿನಾಂಕ | 13.08.2025 |
| 4 | ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯೂ.) ಕೋರ್ಸಿಗೆ ನಡೆಸುವ ಪ್ರವೇಶ ಪರೀಕ್ಷೆಯ ಪ್ರವೇಶಾತಿ ಪತ್ರ ವನ್ನು ಸಮಾಜಕಾರ್ಯ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು -56 ರಲ್ಲಿ ವಿತರಣೆ ದಿನಾಂಕ | 14.08.2026 (10.00 -12.00 Noon) |
| 5 | ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯೂ.) ಕೋರ್ಸಿನ ಪ್ರವೇಶ ಪರೀಕ್ಷೆ ನಡೆಸುವ ದಿನಾಂಕ | 17.08.2026 (2.00 -4.00 PM) |
| 6 | ಯು.ಸಿ.ಪಿ.ಇ ಯಲ್ಲಿ **ಬಿ.ಪಿ.ಎಡ್** ಕೋರ್ಸಿನ ಅಭ್ಯರ್ಥಿಗಳಿಗೆ ದೈಹಿಕ ಪರೀಕ್ಷೆ ನಡೆಸುವ ದಿನಾಂಕ | 17.08.2026 &18.08.2026 (Reporting Time 9.30 AM) |
| 7 | ತಾತ್ಕಾಲಿಕ ಅರ್ಹತಾ ಪಟ್ಟಿ ಪ್ರಕಟಿಸುವ ದಿನಾಂಕ | 19.08.2026 (12.00 Noon) |
| 8 | ಅರ್ಹತಾ ಪಟ್ಟಿಯಲ್ಲಿನ ದೋಷಗಳ ಬಗ್ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 20.08.2026 |
| 9 | ಅಂತಿಮ ಅರ್ಹತಾ ಪಟ್ಟಿ ಪ್ರಕಟಿಸುವ ದಿನಾಂಕ | 21.08.2026 (12.00 Noon) |
| 10 | ಕೌನ್ಸಲಿಂಗ್ ಮುಖಾಂತರ **ವಾಣಿಜ್ಯ** ವಿಷಯಗಳ ಪ್ರವೇಶ ಪ್ರಕ್ರಿಯೆ ಹಾಗೂ ಶುಲ್ಕ ಪಾವತಿಸುವ ದಿನಾಂಕಗಳು | 24 ಮತ್ತು 25 ಆಗಸ್ಟ್ 2026 (Reporting Time 9.30 AM) |
| 11 | ಕೌನ್ಸಲಿಂಗ್ ಮುಖಾಂತರ **ವಿಜ್ಞಾನ** ವಿಷಯಗಳ ಪ್ರವೇಶ ಪ್ರಕ್ರಿಯೆ ಹಾಗೂ ಶುಲ್ಕ ಪಾವತಿಸುವ ದಿನಾಂಕಗಳು | 24 ಮತ್ತು 25 ಆಗಸ್ಟ್ 2026 (Reporting Time 9.30 AM) |
| 12 | ಕೌನ್ಸಲಿಂಗ್ ಮುಖಾಂತರ **ಬಿ.ಪಿ.ಎಡ್ & ಕಲಾ,** ಪ್ರವೇಶ ಪ್ರಕ್ರಿಯೆ ಹಾಗೂ ಶುಲ್ಕ ಪಾವತಿಸುವ ದಿನಾಂಕಗಳು | 24 ಮತ್ತು 25 ಆಗಸ್ಟ್ 2026 (Reporting Time 9.30 AM) |
| 13 | ಆನ್‌ಲೈನ್ ಮುಖಾಂತರ ಪ್ರವೇಶ ಶುಲ್ಕ ಪಾವತಿಸಲು **ಕೊನೆಯ** ದಿನಾಂಕ | 28.08.2026 |
| 14 | ಭರ್ತಿಯಾಗದೆ ಉಳಿದಿರುವ ಸೀಟುಗಳ ಭರ್ತಿಗೆ ಕೌನ್ಸಲಿಂಗ್ ದಿನಾಂಕ | 30.08.2026 (Reporting Time 10.30 AM) |
| 15 | ಭರ್ತಿಯಾಗದೆ ಉಳಿದಿರುವ ಸೀಟುಗಳು ಕೌನ್ಸಲಿಂಗ್ ಮತ್ತು ಶುಲ್ಕ ಪಾವತಿಸುವ ಕೊನೆಯ ದಿನಾಂಕ | 01.09.2026 |
| 16 | ಪ್ರಥಮ ಸೆಮಿಸ್ಟರ್ ತರಗತಿಗಳ ಪ್ರಾರಂಭದ ದಿನಾಂಕ | **01.09.2026** |

Digitally signed by
SHANTHALA K T
Date: 16-07-2026
11:54:55

**ಕುಲಸಚಿವರು**

ಗೆ,

1. ಡೀನ್ ಕಲಾ/ವಾಣಿಜ್ಯ/ವಿಜ್ಞಾನ/ಶಿಕ್ಷಣ/ನಿಕಾಯಗಳು, ಬೆಂಗಳೂರು ವಿಶ್ವವಿದ್ಯಾಲಯ,ಬೆಂಗಳೂರು.
2. ಎಲ್ಲಾ ವಿಭಾಗದ ಮುಖ್ಯಸ್ಥರು/ನಿರ್ದೇಶಕರು/ ಸಂಯೋಜನಾಧಿಕಾರಿಗಳು/ಜ್ಞಾನಭಾರತಿ ಆವರಣ ಮತ್ತು ಸ್ನಾತಕೋತ್ತರ ಕೇಂದ್ರ ರಾಮನಗರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

Scanned with OKEN Scanner

3. ಪ್ರಾಂಶುಪಾಲರು, ದೈಹಿಕ ಶಿಕ್ಷಣ ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ಪ್ರಾಂಶುಪಾಲರುಗಳು, ಸಂಯೋಜಿತ ಕಾಲೇಜುಗಳು (ಸ್ನಾತಕೋತ್ತರ) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
5. ಕಾರ್ಯದರ್ಶಿಗಳು/ಕುಲಪತಿಗಳು/ಕುಲಸಚಿವರು/ಕುಲಸಚಿವರು (ಮೌಲ್ಯಮಾಪನ) ಮತ್ತು ಆಪ್ತ ಸಹಾಯಕರು ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
6. ನೋಡಲ್ ಅಧಿಕಾರಿಗಳು ಯು.ಯು.ಸಿ.ಎಂ.ಎಸ್. ಪೋರ್ಟಲ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
7. Inhawk IT solutions Pvt. Ltd. Bangalore
8. ಕಛೇರಿ ಪ್ರತಿ.

Scanned with OKEN Scanner